**1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ ದ ನ್ಯಾದಂ. ರವರ ನ್ಯಾಯಾಲಯ, ಪಿರಿಯಾಪಟ್ಟಣ.**

**PCR 22/2024**

| | | |
|---|---|---|
| ಸಾಕ್ಷಿಯ ಹೆಸರುಃ | ನಾರಾಯಣ | ಪ್ರಾಸಾಃ 3 |
| ತಂದೆಯ ಹೆಸರುಃ | ಕಂಬಯ್ಯ | |
| ವಯಸ್ಸುಃ | 46 ವರ್ಷ | ಪ್ರಮಾಣೀಕರಿಸಿದ ದಿಃ 31/01/2026 |
| ಉದ್ಯೋಗಃ | ವ್ಯವಸಾಯ | |
| ವಾಸ ಸ್ಥಳಃ | ನಾಗನಹಳ್ಳಿ ಗ್ರಾಮ, ಪಿರಿಯಾಪಟ್ಟಣ ತಾ | |

**ಸಾಕ್ಷಿಯ ಪ್ರಮಾಣೀಕೃತ ಹೇಳಿಕೆ**

ನಾನು ಪಿರ್ಯಾದುದಾರರ ಗಂಡನಾಗಬೇಕು. ಮೇ 2023 ರಂದು ರಾತ್ರಿ 8.30 ಗಂಟೆ ಸಮಯದಲ್ಲಿ ನಮ್ಮ ಮನೆಯ ಬಳಿ ವೇದಾವತಿ, ಶಶಿ, ಸುಮ, ದೇವಮ್ಮ, ರತ್ನ, ರೇಣುಕ, ಗೌರಮ್ಮ, ಸರೋಜಮ್ಮ ಮತ್ತು ಇತರರು ಬಂದು ಗಲಾಟೆ ಮಾಡಿದರು. ನಾನು ಯಾವ ಕಾರಣಕ್ಕೆ ಗಲಾಟೆ ಮಾಡುತ್ತಿದ್ದೀರಿ ಎಂದು ವಿಚಾರಿಸಿದೆ. ಆಗ ಅವರು ಅಂಬೇಡ್ಕರ್ ನಿಗಮದಿಂದ ರೂ. 2,50,000/- ಹಣ ಬಂದಿದ್ದು, ಅದನ್ನು ನಿಮ್ಮ ಹೆಂಡತಿ ಪುಷ್ಪ ಬಳಸಿ ಕೊಂಡಿದ್ದಾರೆ ಎಂದು ತಿಳಿಸಿದರು. ನಾವು ವಿಚಾರಣೆ ಮಾಡಬೇಕೆಂದು ಸುಮ್ಮನಾದೆವು.

2. ಜೂನ್ 2023 ರಂದು ರಾತ್ರಿ 9.00 ಗಂಟೆಯಲ್ಲಿ ಪುನಃ ಮೇಲ್ಕಂಡವರು ನಮ್ಮ ಮನೆಯ ಬಳಿ ಬಂದು ಜಗಳ ಮಾಡಿ ಕೆಟ್ಟ ಭಾಷೆಯಲ್ಲಿ ಬೈದರು. ಅವರ ಪೈಕಿ ಶಶಿ ರವರು ಪುಷ್ಪ ರವರ ಮೊಬೈಲ್ ಅನ್ನು ಕಿತ್ತುಕೊಂಡರು. ನಂತರ ಪುಷ್ಪ ರವರನ್ನು ಕೈಗಳಿಂದ ಹೊಡೆದರು. ಸುಮ ರವರು ಪುಷ್ಪ ರವರ ಕೊರಳಿನಲ್ಲಿದ್ದ 33 ಗ್ರಾಂ ಚಿನ್ನದ ಸರವನ್ನು ಕಿತ್ತು ಕೊಂಡರು. ಪುಷ್ಪ ರವರನ್ನು ಹೊಡೆದಿದ್ದರಿಂದ ಕೆಳಗೆ ಬಿದ್ದು ಹೋದರು. ನಂತರ

ಬೆಟ್ಟದಪುರ ಪೊಲೀಸ್ ಠಾಣೆಗೆ ಹೋಗಿ ದೂರನ್ನು ಸಲ್ಲಿಸಿದೆವು. ನಂತರ ಆಸ್ಪತ್ರೆಗೆ ಹೋದೆವು. ಆ ಸಮಯಕ್ಕೆ ಪ್ರಶಾಂತ್ ರವರು ಹಾಜರಿದ್ದರು.

3. ಮಾರನೇ ದಿನ ಪೋಲೀಸರು ಘಟನಾ ಸ್ಥಳ ಕ್ಕೆ ಬಂದು ವಿಚಾರಿಸಿ ಠಾಣೆಗೆ ನಮ್ಮನ್ನು ಬರಲು ತಿಳಿಸಿದರು. ಠಾಣೆಗೆ ಹೋದಾಗ ನಮ್ಮ ಸಹಿಯನ್ನು ಪಡೆದರು. ಪೋಲೀಸರು ನಮಗೆ ದಾಖಲೆಯಲ್ಲಿ ಏನು ಬರೆದಿದೆ ಎಂದು ಓದಿ ತಿಳಿಸಲಿಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯು ಹೇಳಿದಂತೆ ನನ್ನ ಉಕ್ತಲೇಖದಂತೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸ ಇ ಓ

1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರ.ದ.ನ್ಯಾದಂ. ಪಿರಿಯಾಪಟ್ಟಣ.